# ಕರ್ನಾಟಕ ವಿಧಾನ ಪರಿಷತ್ತು

**ಲಘು ಪ್ರಕಟಣೆ**

**(ಸಾಂಸದಿಕ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಬುಧವಾರ, 03ನೇ ಜುಲೈ, 2025**

ಸಂಖ್ಯೆ: 25

ವಿಧಾನ ಪರಿಷತ್ತಿನ ಶಾಸಕರ ಭವನದಲ್ಲಿನ ವಾಹನಗಳ ಸದ್ಬಳಕೆ ಮತ್ತು ಎಲ್ಲಾ ಮಾನ್ಯ ಶಾಸಕರುಗಳು/ಮಾಜಿ ಶಾಸಕರುಗಳಿಗೆ ಸಮಾನವಾಗಿ ವಾಹನಗಳನ್ನು ಉಪಯೋಗಿಸುವಂತೆ ಅನುಕೂಲ ಕಲ್ಪಿಸಿಕೊಡುವ ದೃಷ್ಟಿಯಿಂದ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಮಾನ್ಯ ಸಭಾಪತಿಯವರು ಸೂಚಿಸಿರುತ್ತಾರೆ.

1. ಎಲ್ಲಾ ಮಾನ್ಯ ಶಾಸಕರುಗಳಿಗೆ/ಮಾಜಿ ಶಾಸಕರುಗಳಿಗೆ ವಾಹನಗಳ ಸೌಲಭ್ಯ ಕುರಿತಂತೆ ಸಮಾನ ಅವಕಾಶ ಕಲ್ಪಿಸುವ ಉದ್ದೇಶಕ್ಕಾಗಿ ಹಾಗೂ ಯಾವುದೇ ಶಾಸಕರು ಅಸಮಾಧಾನಗೊಳ್ಳುವುದನ್ನು ತಪ್ಪಿಸಲು ವಾಹನ ಸೌಲಭ್ಯವನ್ನು ಪಡೆಯಲು ಪ್ರಸ್ತುತ ಇದ್ದ ದಿನಂಪ್ರತಿ 3 ಗಂಟೆಗಳ ಅವಧಿಯನ್ನು 5 ಗಂಟೆಗಳ ಅವಧಿಗೆ ನಿಗಧಿಪಡಿಸಲಾಗಿದೆ.

2. ರಾತ್ರಿ ಪಾಳಿಯಲ್ಲಿ ತುರ್ತು ಸೇವೆಗಾಗಿ ಮಾತ್ರ ವಾಹನವನ್ನು ಉಪಯೋಗಿಸಲು ಪ್ರಸ್ತುತ 1 ಗಂಟೆ ಇದ್ದ ಅವಧಿಯನ್ನು 2 ಗಂಟೆಗಳ ಅವಧಿಗೆ ನಿಗಧಿಪಡಿಸಲಾಗಿದೆ.

ಮಾನ್ಯ ಸಭಾಪತಿಯವರು ನೀಡಿರುವ ಮೇಲ್ಕಂಡ ಸೂಚನೆಗಳನ್ನು ಪಾಲಿಸುವ ಮೂಲಕ ಮಾನ್ಯ ಶಾಸಕರುಗಳು/ಮಾಜಿ ಶಾಸಕರುಗಳು ಸಹಕರಿಸಬೇಕೆಂದು ಕೋರಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರು/ಮಾಜಿ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council.htm